ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೂಡಿಗೆರೆ ತಾಲ್ಲೂಕಿನಲ್ಲಿ ಶ್ರೀಮಾನ್ ಬಿ. ಎಚ್. ಕೃಷ್ಣೇಗೌಡ ಎಂಬುವರು ಇವಕ್ಕಾಗಿ ಸ್ವಲ್ಪ ಜಾಗವನ್ನೂ ಸಹ ಬಿಟ್ಟುಕೊಡುತ್ತೇನೆ ಎಂದು ತಿಳಿಸಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಸಮಾಚಾರ ನನ್ನಲ್ಲಿ ಈಗ ಇಲ್ಲ. ನಕಲೇಶಪುರದಲ್ಲಿ ಸ್ಥಾಪನೆ ಮಾಡುವುದರಿಂದಲೇ ಹೆಚ್ಚು ಅನುಕೂಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—1953ನೇ ಇಸವಿಯಲ್ಲಿ ಎಷ್ಟು ಪ್ರಮಾಣದಲ್ಲಿ ಏಲಕ್ಕಿ ಬೆಳೆಯಾಗಿತ್ತೋ ಅದಕ್ಕಿಂತ ಬಹಳ 1954ರಲ್ಲಿ ಕಡಮೆ ಪ್ರಮಾಣದಲ್ಲಿ ಬೆಳೆಯಾಗಿದೆ. ಇದರಿಂದ ರೈತರಿಗೆ ಬಹಳ ನಷ್ಟವಲ್ಲವೇ ?

ಡಾ॥ ಆರ್. ನಾಗನಗೌಡ.—ಅದಕ್ಕೋಸ್ಕರವೇ ಈ ಸಂಶೋಧನಾ ಕಾರ್ಯವನ್ನು ಅದಷ್ಟು ಜಾಗ್ರತೆ ಮಾಡಬೇಕೆಂದು ಇದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹೋದ ಅಧಿವೇಶನದಲ್ಲೂ ಸಹ ಇದನ್ನು ತಮ್ಮ ಗಮನಕ್ಕೆ ತಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ನಿಜ. ಅದಕ್ಕೋಸ್ಕರವೇ ಇದಕ್ಕೆ ಸಂಬಂಧಪಟ್ಟವರನ್ನು ಕಳುಹಿಸಿ ಏರ್ಪಾಡು ಮಾಡಲು ಪ್ರಯತ್ನಮಾಡುತ್ತಾ ಇದ್ದೇವೆ.

Electricity.

(Step to augment production).

Q.—241. Sri G. NARAYANA GOWDA (Mulbagal—Srinivasapur).—

Will the Government be pleased to state :—

(*a*) whether the present production of electric power is sufficient for the needs in the State ;

(*b*) if the answer is in the negative, what steps they intend taking for further production ?

A.—Dr. R. NAGAN GOWDA (Minister for Agriculture).—

(*a*) No ; it will not meet the needs of the State beyond 1955-56.

(*b*) New schemes such as (i) Shimsha Extension and (ii) Sharavathi Expansion are under contemplation.

1 P.M.

ಶ್ರೀ ಜಿ. ನಾರಾಯಣಗೌಡ.—ಶಿಂಷಾ ವಿದ್ಯುಚ್ಛಕ್ತಿ ವಿಸ್ತರಣೆ ಮತ್ತು ಶರಾವತಿ ವಿದ್ಯುಚ್ಛಕ್ತಿ ಬಡಾವಣೆ—ಈ ಹೊಸ ಯೋಜನೆಗಳನ್ನು ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ?

ಡಾ॥ ಆರ್. ನಾಗನಗೌಡ.—ಈಗ ಅವು ಬಹಳ ತೀವ್ರವಾದ ಪರ್ಯಾಲೋಚನೆಯಲ್ಲಿವೆ. ಪ್ಲಾನಿಂಗ್ ಕಮಿಷನ್ ಪರವಾಗಿ ಒಂದು ಸಮಿತಿಯವರು ಬಂದಿದ್ದರು ಮತ್ತು ಇಂಜಿನಿಯರುಗಳು ಬಂದಿದ್ದರು. ಅವರು ಇಲ್ಲಿ ಅದಕ್ಕೆ ಸೈಟು ಕೊಡಿ ಎಂದು ಕೇಳಿ ಸಂಬಂಧಪಟ್ಟ ವಿಚಾರ ತಿಳಿದುಕೊಂಡಿದ್ದಾರೆ. ನಾವೂ ಬಹಳ ತೀವ್ರವಾಗಿ ಕೆಲಸಮಾಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಶಿಂಷಾ ವಿದ್ಯುಚ್ಛಕ್ತಿ ವಿಸ್ತರಣೆಯಿಂದ ಎಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ ?

ಡಾ॥ ಆರ್. ನಾಗನಗೌಡ.—ನಮಗೆ ಬರುವುದು 18—19 ಸಾವಿರ ಕಿಲೋವಾಟ್ಸ್ ಇರಬಹುದು.

ಶ್ರೀ ಜಿ. ನಾರಾಯಣಗೌಡ.—ಈಗ ಉತ್ಪತ್ತಿಯಾಗುತ್ತಿರುವ 1,15,000 ಕಿಲೋವಾಟ್ಸ್ ವಿದ್ಯುಚ್ಛಕ್ತಿಯಲ್ಲಿ ನಮ್ಮ ದೇಶಕ್ಕೆ ಬೇಕಾದಷ್ಟನ್ನು 1955-56ನೆಯ ಸಾಲಿನವರೆಗೆ ಇಟ್ಟುಕೊಂಡು ಉಳಿದುದನ್ನು ಬೇರೆ ದೇಶಗಳಿಗೆ ಕೊಡಲು ನೀವು ಒಪ್ಪಂದವನ್ನು ಮಾಡಿಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಇಲ್ಲ. ಪೂರ್ವದ ಒಪ್ಪಂದ ಬಿಟ್ಟು ಹೊಸದಾಗಿ ಯಾರಿಗೆ ಕೊಡುವುದಕ್ಕೂ ನಾವು ಸಿದ್ಧವಾಗಿಲ್ಲ.

ಶ್ರೀ ಜಿ. ನಾರಾಯಣಗೌಡ.—ಈಗ ಬೊಂಬಾಯಿ ಸರ್ಕಾರದೊಡನೆ ಒಂದು ಕರಾರು ಮಾಡಿಕೊಳ್ಳುತ್ತಿಲ್ಲವೆ ?

ಡಾ॥ ಆರ್. ನಾಗನಗೌಡ.—1949ರಲ್ಲೇ ಮಾಡಿಕೊಂಡಿತ್ತು, ಈಗಲ್ಲ.

ಶ್ರೀ ಜಿ. ನಾರಾಯಣಗೌಡ.—ತಾವು ಪುನರಾಲೋಚನೆಮಾಡಿ ಅದನ್ನು ಕೈಬಿಡುವುದು ಒಳ್ಳೆಯದಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಜೋಗಿನಲ್ಲಿ ಮಹಾತ್ಮಗಾಂಧಿ ವಿದ್ಯುಚ್ಛಕ್ತಿ ಕೆಲಸ ತೆಗೆದುಕೊಂಡಾಗ ಬೊಂಬಾಯಿ ಸರ್ಕಾರದ ಅನುಮತಿ ಅವಶ್ಯಕವಾಗಿತ್ತು. ಆ ಅನುಮತಿಯಿಲ್ಲದೆ ಆ ಕಾರ್ಯ ಮುಂದುವರಿಸುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ಅವರು ಅನುಮತಿ ಕೊಟ್ಟಾಗ, ಈ ವಿದ್ಯುಚ್ಛಕ್ತಿ ಉತ್ಪತ್ತಿಯಾದಾಗ ಇಷ್ಟು ಕೊಡಬೇಕೆಂದು ಹಿಂದೆ ಒಂದು ಒಪ್ಪಂದವಾಗಿತ್ತು. ಆ ಒಪ್ಪಂದಕ್ಕನುಸಾರವಾಗಿ ನಡೆಯಬೇಕು. ಈಗ ಆಗಿರುವ ಒಪ್ಪಂದ ಬರೀ ದರದ ವಿಚಾರಕ್ಕೆ ಸಂಬಂಧಪಟ್ಟಿದೆ, ಕ್ವಾಂಟಿಟಿ ವಿಚಾರ ಅದರಲ್ಲಿಲ್ಲ.

Mr. SPEAKER.—Question hour is over.

QUESTIONS FOR ANSWERS ON THE DAY

(But not taken up)

Depressed Class People (Scheme to Grant Loans).

Q.—42. Sri H. K. SIDDAIYA (Belur—Scheduled Castes).—

Will the Government be pleased to state :—

(*a*) whether they have introduced a scheme for granting loans for Depressed Class people ;

(*b*) whether it is a fact that they sanctioned Rs. 250 per grantee ;

(*c*) whether it is a fact that all these inconveniences are due to the